ಬೆಂಗಳೂರು ನಗರ ವಿಶ್ವವಿದ್ಯಾನಿಲಯ **BENGALURU CITY UNIVERSITY**
Office of the Registrar, Central College Campus, Dr. B.R. Ambedkar Veedhi, Bengaluru – 560 001.
Ph.No.080-22131385, E-mail: registrarbcu@gmail.com

**ಸಂಖ್ಯೆ: ಬಿಸಿಯು/ವಿವಿಪ–3/244 /2020–21** **ದಿನಾಂಕ: 16.02.2021.**
17

ಗೆ,

ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು

ಮಾನ್ಯರೆ

**ವಿಷಯ: ದಿನಾಂಕ: 21.01.2021 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ 3 ನೇ ಸಮಾನ್ಯ ಸಭೆಯ ನಡಾವಳಿಗಳಿಗೆ ತಿದ್ದುಪಡಿ ಕುರಿತು.**

**ಉಲ್ಲೇಖ: 1) ಈ ಕಛೇರಿ ಪತ್ರ ಸಂಖ್ಯೆ: ಬಿಸಿಯು/ವಿವಿಪ–3/233/2020–21 ದಿನಾಂಕ:02.02.2021.**

2) ಶ್ರೀ ಸತೀಶ್ ಎಂ. ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು ಸಲ್ಲಿಸಿದ ಪತ್ರ ಸಂಖ್ಯೆ:ವಿವಿಪ/3ನೇ ಸಾ.ಸಭೆ/ನಡಾವಳಿ/02/2020–21 ದಿನಾಂಕ 09.02.2021

**3) ಕುಲಪತಿಗಳ ಅನುಮೋದನೆ ದಿನಾಂಕ:** 17.02.2021

***

ಉಲ್ಲೇಖ (1) ರ ಈ ಕಛೇರಿ ಪತ್ರದೊಂದಿಗೆ ಕಳುಹಿಸಿಕೊಡಲಾದ **ದಿನಾಂಕ: 21.01.2021 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ 3 ನೇ ಸಾಮಾನ್ಯ ಸಭೆಯ ನಡಾವಳಿಗಳಿಗೆ** ಮಾನ್ಯ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು ಉಲ್ಲೇಖ (2) ರಲ್ಲಿ ನಮೂದಿಸಿದ ಪತ್ರ ಮುಖಾಂತರ ಸಲ್ಲಿಸಿದ ಅಂಶಗಳ ಹಿನ್ನೆಲೆಯಲ್ಲಿ ಸದರಿ ನಡಾವಳಿಗಳಿಗಳ ವಿಷಯ ಸಂಖ್ಯೆ:–5 ರ ಕುರಿತಂತೆ ಕೆಳಕಂಡ ತಿದ್ದುಪಡಿಗಳನ್ನು ಮಾಡಲಾಗಿದೆ.

==========================================================

**ವಿಷಯ ಸಂಖ್ಯೆ:–5 ಶ್ರೀ ಸತೀಶ್ ಎಂ, ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು, ದಿನಾಂಕ 24.12.2020 ರಂದು ಸಲ್ಲಿಸಿದ ಗೊತ್ತುವಳಿಗಳು.**

ಸದಸ್ಯರಾದ ಶ್ರೀ ಸತೀಶ್ ರವರು ಕೆಲವು ವಿಷಯಗಳನ್ನು ಈ ಸಭೆಯ ಗಮನಕ್ಕೆ ತರಬಯಸಿದರು.

(1) NAAC – ರವರ ಅಡಿಯಲ್ಲಿ ಎಲ್ಲಾ ವಿದ್ಯಾರ್ಥಿಗಳ ಸಂಯೋಜನೆಯ ವಿವರಗಳು ಜಾಲತಾಣದಲ್ಲಿ ಇರಬೇಕು.

(2) ವಿಶ್ವವಿದ್ಯಾನಿಲಯವು ವಿತರಿಸುತ್ತಿರುವ ಅಂಕಪಟ್ಟಿಗಳಲ್ಲಿ ಮುದ್ರಣಗೊಂಡಿರುವ ಗುಣಮಟ್ಟ ಹಲವು ಚೆನ್ನಾಗಿದೆ ಕೆಲವು ಚೆನ್ನಾಗಿಲ್ಲ, ಆದುದರಿಂದ ಗುಣಮಟ್ಟವನ್ನು ಕಾಪಾಡಿಕೊಳ್ಳಬೇಕು ಎಂದರು.

(3) ವಿಶ್ವವಿದ್ಯಾನಿಲಯ ಅಥವಾ ವಿಶ್ವವಿದ್ಯಾಲಯ ಎಂದು ಸಂಭೋದಿಸಬೇಕೆಂಬ ಸಂಶಯವನ್ನು ವ್ಯಕ್ತಪಡಿಸಿದರು.

(4) ವಿದ್ಯಾರ್ಥಿಗಳು SSLC/ PUC ಮಾಹಿತಿ ತುಂಬುವ ಪ್ರಕ್ರಿಯೆಯನ್ನು ಸುಲಭ ಮಾಡಲು ಕೇಳಿಕೊಂಡರು.

(5) ಸಂಯೋಜನೆ ನೀಡಲು ಸ್ಥಳೀಯ ವಿಚಾರಣಾ ಸಮಿತಿಗಳು ಕಾಲೇಜುಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಒಂದೇ ಅಧ್ಯಾಪಕರ ಹೆಸರು ಎರಡೆರಡು ಸಂಸ್ಥೆಗಳಲ್ಲಿ ಗುರುತಿಸಲ್ಪಟ್ಟಿರುವುದು ಕಂಡುಬಂದಿದೆ. ಹಾಗಾಗಿ ಒಬ್ಬ ವ್ಯಕ್ತಿಯನ್ನು ಒಂದು ಕಡೆ ಮಾತ್ರ ಗುರುತಿಸಲು ಸೂಚಿಸಬೇಕು. ಆದುದರಿಂದ ಪರೀಕ್ಷೆಗೆ ಸಂಬಂಧಿಸಿದ ವಿಷಯಗಳಿಗೆ ಅನುಕೂಲವಾಗುತ್ತದೆ.

ಸದಸ್ಯರಾದ ಡಾ. ಎಂ. ಮುನಿನಾರಾಯಣಪ್ಪ ರವರು ವಿದ್ಯಾರ್ಥಿಗಳ ದಾಖಲಾತಿ ವಿಧಾನದ ವಿಷಯದ ಬಗ್ಗೆ ಸಾಕಷ್ಟು ಚರ್ಚೆಗಳಾಗಿವೆ. ಅಂಕಪಟ್ಟಿಯಿಂದ ಮೊದಲುಗೊಂಡು ಸಂಪರ್ಕ ಮಾಡಿಕೊಂಡರೆ ಪ್ರತಿಯೊಬ್ಬ ವಿದ್ಯಾರ್ಥಿಯ ಪೂರ್ಣವಿವರಗಳು ವಿಶ್ವವಿದ್ಯಾನಿಲಯದ ಬಳಿ ಇರುತ್ತದೆ. ಇದಕ್ಕೆ ಸಂಬಂಧಿಸಿದಂತೆ SSLC ಮತ್ತು PUC Board ಜೊತೆಗೆ ವಿಶ್ವವಿದ್ಯಾನಿಲಯವು ಒಡಂಬಡಿಕೆ ಮಾಡಿಕೊಳ್ಳಬಹುದು ಎಂದು ಅಭಿಪ್ರಾಯಪಟ್ಟರು.

ಸದಸ್ಯರಾದ ಪ್ರೊ ಕೆ. ಎನ್ ಗೋದಾಮಣಿ ಯವರು ಮಾತನಾಡಿ ವಿಶ್ವವಿದ್ಯಾನಿಲಯವು ಎಲ್ಲಾ Cell ಗಳನ್ನು ಪ್ರಾರಂಭಮಾಡಲು ಸೂಚಿಸಿ ಅನುಮತಿಸಿದೆ. ಅವರನ್ನು 11 ಕಾಲೇಜುಗಳ ಆಡಳಿತ ಮಂಡಳಿ (Governing Council) ಸದಸ್ಯರನ್ನಾಗಿ ನೇಮಿಸಿದೆ. 11 ಕಾಲೇಜುಗಳಲ್ಲಿ 3 ಕಾಲೇಜಿನವರು ಮಾತ್ರ ಅವರನ್ನು ಸಭೆಗೆ ಕರೆಯುತ್ತಿರುವುದಾಗಿ ತಿಳಿಸಿದರು. ಸಂಯೋಜನಾ ಅರ್ಜಿಯಲ್ಲಿ Governing Council ಅಂಕಣ ಕಂಡು ಬರುತ್ತಿಲ್ಲ ಎಂದು ತಿಳಿಸಿದರು.

ಸದಸ್ಯರಾದ ಶ್ರೀ ತಿಪ್ಪೇಸ್ವಾಮಿ ರವರು ಪರಿನಿಯಮಗಳು ಅತ್ಯಂತ ಅವಶ್ಯಕ ಹಾಗೂ ಎಲ್ಲರೂ ಅವುಗಳನ್ನು ಅನುಸರಿಸಲೇಬೇಕು. ಪರಿನಿಯಮಗಳನ್ನು ಅನುಸರಿಸಿರುವ ಬಗ್ಗೆ ವಿಚಾರಣೆ ಮಾಡಲು ಅವಶ್ಯಕತೆ ಇದ್ದಲ್ಲಿ ಒಂದು ಸಮಿತಿಯನ್ನು ರಚಿಸಬಹುದು ಎಂದು ಅಭಿಪ್ರಾಯಪಟ್ಟರು. NIC ರವರ ಬಳಿ SSLC/PUC ವಿದ್ಯಾರ್ಥಿಗಳ ಎಲ್ಲಾ ವಿವರಗಳು ಲಭ್ಯತೆ ಇರುವುದರಿಂದ ಅವರಲ್ಲಿ ಒಪ್ಪಂದ ಮಾಡಿಕೊಂಡು ವಿವರಗಳನ್ನು ಪಡೆಯಲು ಅವಕಾಶ ಇದೆ ಎಂದರು.

ಸಭಾಧ್ಯಕ್ಷರು, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯವು ಮರು ನೇಮಕಗೊಂಡಂತೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಎಂಬ ವಿಷಯದ ಬಗ್ಗೆ ವಿದ್ಯಾರ್ಥಿಗಳಿಗೆ ನೀಡಬೇಕಾಗಿರುವ ಅಂಕಪಟ್ಟಿ, ಮೈಗ್ರೇಷನ್ ಪ್ರಮಾಣ ಪತ್ರ, ಪದವಿ ಪ್ರಮಾಣ ಪತ್ರಗಳ ಬಗ್ಗೆ ಕ್ರಮವಹಿಸಲಾಗಿದೆ. ಅವರಿಗೆ ಇವುಗಳನ್ನು ನೀಡುವಾಗ ಬೆಂಗಳೂರು ನಗರ ವಿಶ್ವವಿದ್ಯಾನಿಲಯ formerly known as ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ ಎಂದು ಸೂಚಿಸಲಾಗುವ ಕ್ರಮವನ್ನು ಕೈಗೊಂಡಿದೆ.

ಕುಲಸಚಿವರು (ಮೌಲ್ಯಮಾಪನ) ಮಾತನಾಡಿ ವಿಶ್ವವಿದ್ಯಾನಿಲಯ ಎಂದು Gazette notification ಆಗಿದೆ. ಆದುದರಿಂದ ಅದು "ನಿಲಯ" ಎಂದು ಹೇಳಿದರು. ಹಾಗೂ ಅಂಕಪಟ್ಟಿಗಳಲ್ಲಿ ವಿಶ್ವವಿದ್ಯಾನಿಲಯ ಎಂದು ಮುದ್ರಿಸಲಾಗುವುದು. ವಿಶ್ವವಿದ್ಯಾನಿಲಯ ಪ್ರಾರಂಭಗೊಂಡ ದಿನಾಂಕದಿಂದ 2018-19 ನೇ ಸಾಲಿನ ಎಲ್ಲಾ ವಿದ್ಯಾರ್ಥಿಗಳಿಗೆ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯವು Chancellor ರವರಿಂದ ಅಂಕಿತಗೊಂಡ ದಿನದಂತೆ ಅವರಿಗೆ ನೀಡುವ Marks Card, Degree Certificate, Official Transcript, Migration Certificate ಜೊತೆಗೆ ಬೇರೆ ಯಾವುದಾದರೂ ಹೆಚ್ಚುವರಿ ಪ್ರಮಾಣ ಪತ್ರಗಳಲ್ಲಿ Bengaluru City University earlier known as Bengaluru Central University ಎಂದು ನೀಡಲಾಗುವುದು.

**ಹಾಗೆಯೇ "ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯವು ಬೆಂಗಳೂರು ನಗರ ವಿಶ್ವವಿದ್ಯಾನಿಲಯ"ಎಂದು ಕನ್ನಡದಲ್ಲಿಯೂ ನೀಡಲಾಗುವುದು.**

ಸಭಾಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ NIC ರವರ ಬಳಿ ಇರುವ ವಿವರಗಳು ಸರ್ಕಾರಕ್ಕೆ ಸಂಬಂಧಿಸಿದ್ದವುಗಳು ಆಗಿರುತ್ತವೆ. ವಿಶ್ವವಿದ್ಯಾನಿಲಯದಿಂದ ಯಾವುದೇ ಕ್ರಮ ಜರುಗಿಸಲು ಅವಕಾಶ ಇಲ್ಲ. ಅತಿಥಿ ಉಪನ್ಯಾಸಕರು ಎರಡೆರಡು ಕಡೆ ಕೆಲಸ ಮಾಡಬಹುದು ಮತ್ತು ಅತಿಥಿ ಉಪನ್ಯಾಸಕರಿಗೆ ಪರೀಕ್ಷಾ ಸಂಬಂಧಿತ ಕೆಲಸಗಳನ್ನು ನೀಡಲು ಬರುವುದಿಲ್ಲ ಎಂದು ತಿಳಿಸಿದರು.

**ಸದಸ್ಯರಾದ ಶ್ರೀ ಸತೀಶ್ ರವರು ವಿದ್ಯಾರ್ಥಿಗಳ ಫಲಿತಾಂಶದ ವಿವರಗಳನ್ನು ಮುಂಚೆಯೇ ಸಂಬಂಧಿಸಿದ LIC online portal ನಲ್ಲಿ ದಾಖಲಾತಿ/ ಅರ್ಜಿಗಳಲ್ಲಿ ತುಂಬಲ್ಪಟ್ಟಿದ್ದರೆ ಅದನ್ನು ಮತ್ತೊಮ್ಮೆ ಸ್ಥಳೀಯ ವಿಚಾರಣಾ ಸಮಿತಿಯವರು ಬೇಟಿ ನೀಡಿದಾಗ ಆ ವಿವರಗಳನ್ನು ತುಂಬುವ ಪ್ರಕ್ರಿಯೆ ಇರುವುದಿಲ್ಲ. ಒಂದೊಂದು ಕಾಲೇಜಿನಲ್ಲಿ 3,000 ವಿದ್ಯಾರ್ಥಿಗಳಿದ್ದರೆ ಸ್ಥಳೀಯ ವಿಚಾರಣಾ ಸಮಿತಿಯವರು ಫಲಿತಾಂಶದ ವರದಿಗಳನ್ನು ತುಂಬಲು ಸಮಯ ಹಿಡಿಯುವುದರಿಂದ ಅಂತಹ ಅರ್ಜಿಗಳಲ್ಲಿ ಮುಂಚೆಯೇ ವಿವರಗಳನ್ನು ತುಂಬಿ ಸಮಿತಿಯವರಿಗೆ ನೀಡುವ ಅವಕಾಶವನ್ನು ಕಲ್ಪಿಸಲು ಸೂಚಿಸಿದರು.**

ಸದಸ್ಯರಾದ ಶ್ರೀ ತಿಪ್ಪೇಸ್ವಾಮಿ ರವರು ಹೊಸ software ಬರಲಿ ನಂತರ ಮಾಡಬಹುದು ಎಂದರು.

**ವಿದ್ಯಾವಿಷಯಕ ಪರಿಷತ್ತಿನ ನಿರ್ಣಯ:** ಗಮನಕ್ಕೆ ತೆಗೆದುಕೊಳ್ಳಲಾಯಿತು.

==================================================================

ದಿನಾಂಕ: 21.01.2021 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ 3 ನೇ ಸಾಮಾನ್ಯ ಸಭೆಯ ನಡಾವಳಿಗಳು ಮೇಲ್ಕಂಡ ತಿದ್ದುಪಡಿಗಳಿಗೆ ಒಳಪಟ್ಟು ಅಂತಿಮಗೊಳಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು-1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ,
4. ಕಛೇರಿ ಪ್ರತಿ / ರಕ್ಷಣಾ ಕಡತ

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬಿಸಿಯು/ ವಿವಿಪ/ 3ನೇ ಸಭೆ/ 233 /2020-21. ದಿನಾಂಕ:.02.02.2021.

ಗೆ,

ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು,
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ,
ಬೆಂಗಳೂರು

ಮಾನ್ಯರೆ

**ವಿಷಯ: ದಿನಾಂಕ: 21.01.2021 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ 3 ನೇ ಸಭೆಯ ನಡಾವಳಿಗಳು.**

***

ದಿನಾಂಕ: 21.01.2021 ರಂದು ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು-560 001 ರಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ 3 ನೇ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 4.18 ರನ್ವಯ ಕಳುಹಿಸುತ್ತಿದ್ದೇನೆ.

ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಹದಿನಾಲ್ಕು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು-1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ,
4. ಕಛೇರಿ ಪ್ರತಿ / ರಕ್ಷಣಾ ಕಡತ

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬಿಸಿಯು/ ವಿವಿಪ/ 3ನೇ ಸಭೆ/ 233 /2020-21.

ದಿನಾಂಕ:.02.02.2021.

ಗೆ,

ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾಲಯ,
ಬೆಂಗಳೂರು

ಮಾನ್ಯರೆ

**ವಿಷಯ: ದಿನಾಂಕ: 21.01.2021 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ 3 ನೇ ಸಭೆಯ ನಡಾವಳಿಗಳು.**

***

ದಿನಾಂಕ: 21.01.2021 ರಂದು ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು-560 001 ರಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ 3 ನೇ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 4.18 ರನ್ವಯ ಕಳುಹಿಸುತ್ತಿದ್ದೇನೆ.

ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಹದಿನಾಲ್ಕು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು-1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ,
4. ಕಛೇರಿ ಪ್ರತಿ / ರಕ್ಷಣಾ ಕಡತ

ಬೆಂಗಳೂರು ನಗರ ವಿಶ್ವವಿದ್ಯಾನಿಲಯ

**BENGALURU CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
Ph.No.080-22131385, E-mail: registrarbcu@gmail.com

**ಸಂಖ್ಯೆ: ಬಿಸಿಯು/ವಿವಿಪ–3/ /2020–21** **ದಿನಾಂಕ: 02.02.2021**

ದಿನಾಂಕ 21.01.2021 ರಂದು ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು – 560 001 ಇಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ 3ನೇ ಸಾಮಾನ್ಯ ಸಭೆಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಡಾ:ಎನ್. ನರಸಿಂಹಮೂರ್ತಿ<br>ಕುಲಪತಿಗಳು | ಸಭಾಧ್ಯಕ್ಷರು |
| 2. | ಶ್ರೀ. ಕೆ.ಎ. ತಿಪ್ಪೇಸ್ವಾಮಿ | ಸದಸ್ಯರು |
| 3. | ಡಾ. ಲಿಡಿಯಾ ಪಿ. ಸ್ಯಾಮುಯೆಲ್ | ಸದಸ್ಯರು |
| 4. | ಶ್ರೀ. ಎಂ. ಚಿಕ್ಕಮುನಿಯಪ್ಪ | ಸದಸ್ಯರು |
| 5. | ಡಾ: ಶಿಂಟಿ ಆಂಟನಿ | ಸದಸ್ಯರು |
| 6. | ಶ್ರೀ. ಕೆ. ಶಿವಣ್ಣ | ಸದಸ್ಯರು |
| 7. | ಡಾ: ಗುರುನಾಥರಾವ್ ವೈದ್ಯ | ಸದಸ್ಯರು |
| 8. | ಡಾ: ಅನೇಸಿಯಾ | ಸದಸ್ಯರು |
| 9. | ಶ್ರೀ. ಕೆ.ಎಂ. ಮಹೇಶ್ | ಸದಸ್ಯರು |
| 10. | ಶ್ರೀ ಸತೀಶ್ ಎಂ. | ಸದಸ್ಯರು |
| 11. | ಡಾ: ಮೊಹಮ್ಮದ್ ಸುಹೇಲ್ ಇಕ್ಬಾಲ್ | ಸದಸ್ಯರು |
| 12. | ಪ್ರೊ. ಕೆ.ಎನ್. ಗೋದಾಮಣಿ | ಸದಸ್ಯರು |
| 13. | ಡಾ: ಎಸ್.ಬಿ. ಅನುಪಮಾ | ಸದಸ್ಯರು |
| 14. | ಡಾ: ಬಿ.ಎನ್. ಉಮೇಶ್ | ಸದಸ್ಯರು |
| 15. | ಡಾ: ವಿ.ಆರ್. ದೇವರಾಜ್ | ಸದಸ್ಯರು |
| 16. | ಡಾ: ವಿ. ಗಾಯತ್ರಿ | ಸದಸ್ಯರು |
| 17. | ಡಾ: ಎಸ್. ಹರಿಪ್ರಸಾದ್ | ಸದಸ್ಯರು |
| 18. | ಡಾ: ಪಿ. ಆರ್. ಚೇತನ | ಸದಸ್ಯರು |
| 19. | ಡಾ: ಎಂ. ಮುನಿನಾರಾಯಣಪ್ಪ | ಸದಸ್ಯರು |
| 20. | ಡಾ: ಎಂ. ಮುನಿರಾಜು | ಸದಸ್ಯರು |
| 21. | ಡಾ: ಎಂ. ಪಾಂಡುರಂಗಪ್ಪ | ಸದಸ್ಯರು |
| 22. | ಪ್ರೊ. ಬಿ. ರಮೇಶ್<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 23. | ಶ್ರೀ ಪಿ. ಎಲ್. ವೆಂಕಟೇಶಮೂರ್ತಿ<br>ವಿತ್ತಾಧಿಕಾರಿಗಳು | ಸದಸ್ಯರು |
| 24. | ಶ್ರೀಮತಿ ಆರತಿ ಆನಂದ್<br>ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಹಾಜರಾಗದ ಸದಸ್ಯರು: ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರು, ತಾಂತ್ರಿಕ ಶಿಕ್ಷಣ ನಿರ್ದೇಶಕರು, ಶ್ರೀಮತಿ ಸೌಮ್ಯರೆಡ್ಡಿ, ಶ್ರೀ ಪ್ರಕಾಶ್ ಕೆ. ರಾಥೋಡ್, ಡಾ.ಪಿ.ವಿ. ಪದ್ಮಜಾ.

ಕುಲಸಚಿವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ ಸಭೆಯನ್ನು ನಡೆಸಲು ಕೋರಮ್ ಇಲ್ಲದೆ ಇರುವುದರಿಂದ ಈ ಸಭೆಯನ್ನು ಸ್ವಲ್ಪ ಅವಧಿಯವರೆಗೆ ಮುಂದೂಡಲಾಗಿದೆ ಎಂದು ತಿಳಿಸಿದರು.

ಸದಸ್ಯ ಕಾರ್ಯದರ್ಶಿಗಳು, ಸಭೆಗೆ ವಂದಿಸಿ ಸಭೆಯಲ್ಲಿ ಹಾಜರಾಗಿದ್ದ ಎಲ್ಲಾ ಸದಸ್ಯರನ್ನು ಮುಂದೂಡಲಾದ ಸಭೆಗೆ ಆಹ್ವಾನಿಸಿ ವಂದನೆಗಳನ್ನು ಅರ್ಪಿಸಿದರು. ಶೈಕ್ಷಣಿಕ ಸಭೆಯಲ್ಲಿ ಹಾಜರಿರುವ ಸದಸ್ಯರುಗಳಿಗೆ ಅವರವರ ಪರಿಚಯವನ್ನು ನೀಡಲು ಮನವಿ ಮಾಡಿದರು. ಮೊದಲಿಗೆ ಅವರನ್ನು ಈ ಸಭೆಗೆ ಪರಿಚಿಯಿಸಿಕೊಂಡರು. ನಂತರ ಹಾಜರಿದ್ದ ಎಲ್ಲಾ ಸದಸ್ಯರು ಒಬ್ಬೊಬ್ಬರಾಗಿ ಅವರ ಪರಿಚಯವನ್ನು ಸಭೆಗೆ ತಿಳಿಸಿದರು.

**ವಿಷಯ ಸಂಖ್ಯೆ:(1) 1. ದಿನಾಂಕ 22.10.2019 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ 2ನೇ ಸಭೆಯ**
**2. ದಿನಾಂಕ 15.02.2020 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಯ**
**3. ದಿನಾಂಕ 30.05.2020 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಯ**
**4. ದಿನಾಂಕ 24.08.2020 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಗಳ ನಡಾವಳಿಗಳನ್ನು ಧೃಢೀಕರಿಸುವ ಕುರಿತು.**

**ವಿದ್ಯಾವಿಷಯಕ ಪರಿಷತ್ತಿನ ನಿರ್ಣಯ: ನಡಾವಳಿಗಳನ್ನು ಧೃಢೀಕರಿಸಿತು**

**ವಿಷಯ ಸಂಖ್ಯೆ:(2) 1. ದಿನಾಂಕ 22.10.2019 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ 2ನೇ ಸಭೆಯ**
**2. ದಿನಾಂಕ 15.02.2020 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಯ**
**3. ದಿನಾಂಕ 30.05.2020 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಯ**
**4. ದಿನಾಂಕ 24.08.2020 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ** ಸಭೆಗಳ ನಡಾವಳಿಗಳ ಮೇಲೆ ಕೈಕೊಂಡ ಕ್ರಮಗಳ ಪರಿಶೀಲನೆ ಹಾಗೂ ಅನುಮೋದನೆ ಕುರಿತು.

ಸ್ವಲ್ಪ ತಡವಾಗಿ ಸಭೆಗೆ ಬಂದ ಸನ್ಮಾನ್ಯ ಶ್ರೀ ತಿಪ್ಪೇಸ್ವಾಮಿ, ವಿಧಾನ ಸಭಾ ಸದಸ್ಯರವರನ್ನು ಸಭೆಗೆ ಕುಲಸಚಿವರು ಅಹ್ವಾನಿಸಿದರು. ಶ್ರೀಯುತರು ಅವರ ಪರಿಚಯವನ್ನು ಸಭೆಗೆ ಮಾಡಿಕೊಂಡರು.

ವಿಷಯ ಸಂಖ್ಯೆ ಎರಡರಲ್ಲಿ ಮಂಡಿಸಲಾಗಿರುವ ದಿನಾಂಕ 24.08.2020 ರಂದು ನಡೆದಿರುವ ಅಸಾಮಾನ್ಯ ಸಭೆಯ ನಡಾವಳಿಯಲ್ಲಿ ಸ್ವಲ್ಪ ತಿದ್ದುಪಡಿ ಮಾಡಬೇಕಾಗಿರುವುದರಿಂದ ಆ ವಿಷಯವನ್ನು ಇಲ್ಲಿ ಪ್ರತ್ಯೇಕವಾಗಿ ಪರಾಮರ್ಶಿಕ ಟಿಪ್ಪಣಿಯೊಂದಿಗೆ ಮಂಡಿಸಲಾಗಿದೆ ಮತ್ತು ಈ ಪರಿನಿಯಮಗಳನ್ನು ಪರಿನಿಯಮದ ಸಭೆಯಲ್ಲಿ ಸುಮಾರು ಬಾರಿ ಚರ್ಚಿಸಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು. ಪ್ರೊ. ತಿಮ್ಮೇಗೌಡ, ನಿವೃತ್ತ ಉಪ ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ಸಲ್ಲಿಸಿರುವ 11 Statutes ಪಟ್ಟಿಯಲ್ಲಿ ಕಣ್ತಪ್ಪಿನಿಂದ 1.3 **STATUTE GOVERNING ESTABLISHMENT OF NEW POST-GRADUATE DEPARTMENTS OF STUDIES, INSTITUTION OF TEACHING POSTS FOR THE NEW AND EXISTING POST-GRADUATE DEPARTMENTS OF STUDIES IN BENGALURU CITY UNIVERSITY, 2020** - ಬಿಟ್ಟು ಹೋಗಿದೆ. ಹಾಗೂ ಎರಡು ಬಾರಿ ಮುದ್ರಿತಗೊಂಡಿರುವ **Statute Governing the Institution of Endowments for Award of Gold Medals, Prizes, Fellowships, Scholarships Endowment Lectures and Academic Chairs, 2020 -** ಒಂದೇ ಪರಿನಿಯಮ ಎರಡು ಕಡೆ ಸೇರಿದ್ದು, 1.10 ಪರಿನಿಯಮ ತೆಗೆದು ಹಾಕಲು ಸಭೆಯ ಅನುಮತಿಯನ್ನು ಕೋರಿದರು.

ಸದಸ್ಯರಾದ ಶ್ರೀ ಚಿಕ್ಕಮುನಿಯಪ್ಪನವರು ಈಗಾಗಲೇ ಸುಮಾರು ಬಾರಿ ಚರ್ಚೆ ಆಗಿದೆ ಎಂದು ಹೇಳುತ್ತಿದ್ದೀರಿ, ಅದರ ಪ್ರತಿಗಳನ್ನು ಒದಗಿಸಿ ಎಂದು ಕೋರಿದರು.

ಸಭಾಧ್ಯಕ್ಷರು, ಮಾತನಾಡಿ ಈ ಕರಡು ಪರಿನಿಯಮಗಳನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿತ್ತು ಮತ್ತು ಸರ್ಕಾರವು ಸೂಚಿಸಿದ ಸಲಹೆಯಂತೆ, ಪರಿನಿಯಮಗಳಲ್ಲಿ ತಿದ್ದುಪಡಿಗಳನ್ನು ಅಳವಡಿಸಿಕೊಡಲು ಮತ್ತೊಮ್ಮೆ ಪರಿನಿಯಮ ಸಮಿತಿಯ ಅಧ್ಯಕ್ಷರನ್ನು ಮನವಿಮಾಡಲಾಗಿತ್ತು. ಪರಿನಿಯಮ ಸಮಿತಿಯು ಮಾಡಿಕೊಟ್ಟ ತಿದ್ದುಪಡಿ ಪರಿನಿಯಮಗಳನ್ನು ಹಣಕಾಸು ಸಮಿತಿ, ಸಿಂಡಿಕೇಟ್ ಸಭೆಗಳಲ್ಲಿ ಮಂಡಿಸಿ ನಿರ್ಣಯ ಪಡೆಯಲಾಗಿದೆ. ಇಲ್ಲಿ ಚರ್ಚೆಗೆ ಅವಕಾಶ ಇರುವುದಿಲ್ಲ. ಈಗಾಗಲೆ ದಿನಾಂಕ 24.08.2020 ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಸುಧೀರ್ಘ ಚರ್ಚೆ ಮಾಡಿ ಇಲ್ಲಿ ಅನುಸರಣಾ ವರದಿಯನ್ನು (Action taken report) ತರಲಾಗಿದೆ. ಈ ವೇಳೆಯಲ್ಲಿ ಕಂಡು ಬಂದ ನ್ಯೂನತೆಯನ್ನು ತಿದ್ದುಪಡಿಮಾಡಿಕೊಳ್ಳಲು ಈ ಸಭೆಯನ್ನು ಕೋರಲಾಗಿದೆ ಎಂದರು.

ಸನ್ಮಾನ್ಯ ತಿಪ್ಪೇಸ್ವಾಮಿಯವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಶ್ರೀ ಚಿಕ್ಕಮುನಿಯಪ್ಪ ನವರು ಕೋರಿದಂತೆ ಅವರಿಗೆ ಬೇಕಾಗಿರುವ ಪ್ರತಿಗಳನ್ನು ನೀಡಿ ಎಂದು ಸೂಚಿಸಿ ಈ ವಿಷಯವನ್ನು ಒಪ್ಪಬಹುದು ಎಂದರು.

**ವಿದ್ಯಾವಿಷಯಕ ಪರಿಷತ್ತಿನ ನಿರ್ಣಯ:**

**ಪ್ರಸ್ತಾವನೆಯನ್ನು ಸರ್ವಾನುಮತದಿಂದ ಅನುಮೋದಿಸಿತು. ದಿನಾಂಕ 24.08.2020 ರ ನಡಾವಳಿಗೆ 11 ಪರಿನಿಯಮಗಳ ಪಟ್ಟಿಯಲ್ಲಿ ಈ ಕೆಳಕಂಡಂತೆ ತಿದ್ದುಪಡಿಮಾಡಿ ಅನುಮೋದಿತ ಪರಿನಿಯಮವನ್ನು ಅನುಮೋದಿಸಲಾಯಿತು.**

**(1)** **ಪರಿನಿಯಮ Statute Governing the Institution of Endowments for Award of Gold Medals, Prizes, Fellowships, Scholarships Endowment Lectures and Academic Chairs, 2020 - ಎರಡು ಬಾರಿ 1.8 ಮತ್ತು 1.10 ರಲ್ಲಿ ನಮೂದಿಸಲಾಗಿದೆ. 1.10 ರಲ್ಲಿ ನಮೂದಿಸಿರುವ ಸದರಿ ಪರಿನಿಯಮವನ್ನು ತೆಗದುಹಾಕಲು (delete) ಸಭೆ ಅನುಮೋದಿಸಿತು.**

**(2)** **1.10 STATUTE GOVERNING ESTABLISHMENT OF NEW POST-GRADUATE DEPARTMENTS OF STUDIES, INSTITUTION OF TEACHING POSTS FOR THE NEW AND EXISTING POST-GRADUATE DEPARTMENTS OF STUDIES IN BENGALURU CITY UNIVERSITY, 2020 - ಪರಿನಿಯಮಕ್ಕೆ ಸೇರಿಸಲು ಅನುಮೋದನೆ ನೀಡಲಾಯಿತು.**

**ವಿಷಯ ಸಂಖ್ಯೆ:– 3 ದಿನಾಂಕ 09.09.2020 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಸ್ಥಾಯಿ ಸಮಿತಿ ಸಭೆಗಳ ನಡಾವಳಿಗಳನ್ನು ಸ್ಥಿರೀಕರಿಸುವ ಕುರಿತು**

ಸದಸ್ಯರಾದ ಪ್ರೊ. ಕೆ. ಎನ್. ಗೋದಾಮಣಿ ರವರು 30 ಅಂಕಗಳನ್ನು ನಿಗದಿಪಡಿಸಿರುವ ಕಡೆ ಹಾಜರಾತಿಗೆ ಅಂಕಗಳನ್ನು ನಿಗದಿಪಡಿಸಿರುವುದಿಲ್ಲ. ಆದುದರಿಂದ ಹಾಜರಾತಿಗೆ ಅಂಕಗಳನ್ನು ನಿಗದಿಪಡಿಸುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು.

CBCS tool guide ನ ಪ್ರಕಾರ Sessional ಅಂಕಗಳಿಗೆ 20, ಸೆಮಿಸ್ಟರ್‌ಗೆ 5 ಅಂಕಗಳು ಮತ್ತು field work ಗೆ 5 ಅಂಕಗಳನ್ನು ನಿಗದಿಪಡಿಸಲಾಗಿದೆ ಆದುದರಿಂದ ಹಾಜರಾತಿಗೆ 5 ಅಂಕಗಳನ್ನು ನಿಗದಿ ಪಡಿಸುವ ಅವಕಾಶ ಇರುವುದಿಲ್ಲ ಎಂದು ಕುಲಸಚಿವರು(ಮೌಲ್ಯಮಾಪನ) ತಿಳಿಸಿದರು.

ಸದಸ್ಯರಾದ ಶ್ರೀ ಚಿಕ್ಕಮುನಿಯಪ್ಪ, ಹಾಗಾದರೆ CBCS guidelines ಏನು ಅನುಮೋದನೆ ಗೊಂಡಿದೆ ಅದರಂತೆ 30 ಅಂಕಗಳಲ್ಲಿ ಹಾಜರಾತಿಗೆ ಅಂಕಗಳನ್ನು ಅನ್ವಯಿಸಲು ಬರುವುದಿಲ್ಲ. ಎಲ್ಲಾ ವಿಷಯಗಳಿಗೆ ಒಂದೇ ನಿಯಮ ಇರಬೇಕು. ಆದುದರಿಂದ ಹಾಜರಾತಿಗೆ ಅಂಕಗಳನ್ನು ನೀಡುತ್ತಿದ್ದರೆ ಅದನ್ನು ಅಮಾನ್ಯ ಮಾಡಿ ಎಂದು ಸೂಚಿಸಿದರು.

ಸಭಾಧ್ಯಕ್ಷರು ಪ್ರತಿಯೊಬ್ಬ ವಿದ್ಯಾರ್ಥಿಯೂ ಪರೀಕ್ಷೆಯನ್ನು ಬರೆಯಲು 75% ಹಾಜರಾತಿಯನ್ನು ಪಡೆದಿರಲೇಬೇಕು ಹಾಗೂ ಕೆಲವು ವಿಶೇಷ ಸಂದರ್ಭಗಳಲ್ಲಿ ಅಂದರೆ ವಿದ್ಯಾರ್ಥಿಯ ಆರೋಗ್ಯಕ್ಕೆ ಸಂಬಂಧಿಸಿದಂತೆ ನ್ಯೂನತೆ ಕಂಡು ಬಂದರೆ 75% ಹಾಜರಾತಿಯನ್ನು ಉಪಕುಲಪತಿಗಳ ಅಧಿಕಾರದ ಅಡಿಯಲ್ಲಿ 65% ಮಾಡಲು ಅವಕಾಶ ಇರುತ್ತದೆ ಎಂದು ತಿಳಿಸಿದರು.

ಸದಸ್ಯರಾದ ಶ್ರೀ ಸತೀಶ್ ರವರು ಮಾತನಾಡಿ ಕಾಲೇಜಿಗೆ 75% ಹಾಜರಾತಿ ಪಡೆದ ವಿದ್ಯಾರ್ಥಿಗಳಿಗೆ 2 ಅಂಕಗಳು ಮತ್ತು 80% ಹಾಜರಾದ ವಿದ್ಯಾರ್ಥಿಗಳಿಗೆ 5 ಅಂಕಗಳನ್ನು ನಿಗದಿ ಪಡಿಸಿ ಎಂದು ಮನವಿ ಮಾಡಿದರು.

ಸದಸ್ಯರಾದ ಡಾ. ಎಂ. ಮುನಿನಾರಾಯಣಪ್ಪರವರು ಹಾಜರಾತಿಗಾಗಿ ಅಂಕಗಳನ್ನು ಮೀಸಲಿಡಲು ಸಹಮತಿಸುತ್ತೇನೆ, ಇದರಿಂದ ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಿರುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಬೆಂಗಳೂರು ಕೇಂದ್ರ ವಿಶ್ವವಿದ್ಯಾಲನಿಯವಾಗಿ ನಿರ್ಮಿತವಾದಾಗ ನೇಮಕವಾದ ವಿದ್ಯಾವಿಷಯಕ ಪರಿಷತ್ತಿನ ಸಮಿತಿಯು ಜಾರಿಯಲ್ಲಿ ಇಲ್ಲದೇ ಇದ್ದುದರಿಂದ, ಎಲ್ಲಾ ನಿಖಾಯದ ಡೀನರು ಇರಲಿಲ್ಲದಿದ್ದರೂ ಸಹ CBCS ನಿಯಮಾವಳಿಗಳನ್ನು ಅಳವಡಿಸಿಕೊಳ್ಳಲಾಗಿದೆ. ಹಾಗೂ ಈ ಬಗ್ಗೆ ಚರ್ಚೆಗಳು ಆಗಿವೆ ಎಂದು ಸಭಾಧ್ಯಕ್ಷರು ಸಭೆಯ ಗಮನಕ್ಕೆ ತಂದರು.

ಸದಸ್ಯರಾದ ಶ್ರೀ ತಿಪ್ಪೇಸ್ವಾಮಿ ರವರು uniform guidelines ಮಾಡಿಕೊಳ್ಳಿ ಇತಿಹಾಸ ವಿಷಯಗಳಿಗೆ ಬೇರೆ, ವಿಜ್ಞಾನ ವಿಷಯಗಳಿಗೆ ಬೇರೆ, ವಾಣಿಜ್ಯ ವಿಷಯಗಳಿಗೆ ಬೇರೆ ಬೇರೆ ಎಂದು ಮಾಡಿಕೊಂಡು UGC ನಿಯಮಾವಳಿಗಳನ್ನು ಅಳವಡಿಸಿಕೊಂಡು ಸೂಕ್ತವಾಗಿ ಅಂಕಗಳನ್ನು ಅವಶ್ಯಕತೆ ಇದ್ದಲ್ಲಿ ನಿಗದಿಪಡಿಸುವುದು ಸೂಕ್ತ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಇಲ್ಲವಾದಲ್ಲಿ ಈಗಿರುವುದನ್ನೇ ಮುಂದುವರೆಸಿಕೊಂಡು ಹೋಗಿ ಎಂದೂ ಸಹ ಸೂಚಿಸಿದರು.

ಸದಸ್ಯರಾದ ಡಾ. ವಿ. ಆರ್. ದೇವರಾಜ್ ರವರು ಪರಿನಿಯಮಗಳು ವಿಶ್ವವಿದ್ಯಾಲಯದಿಂದ ಅನುಮೋದಿಸಲಾಗಿದೆ.

**ವಿದ್ಯಾವಿಷಯಕ ಪರಿಷತ್ತಿನ ನಿರ್ಣಯ:**

**ದಿನಾಂಕ 09.09.2020 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಸ್ಥಾಯಿ ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದಿಸಲಾಯಿತು**

**ವಿಷಯ ಸಂಖ್ಯೆ:- 4 ದಿನಾಂಕ 04.12.2020 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಸ್ಥಾಯಿ ಸಮಿತಿ ಸಭೆಗಳ ನಡಾವಳಿಗಳನ್ನು ಸ್ಥಿರೀಕರಿಸುವ ಕುರಿತು**

ಸದಸ್ಯರಾದ ಡಾ. ಎಂ. ಮುನಿನಾರಾಯಣಪ್ಪ ನವರು B.Voc ಕೋರ್ಸಿಗೆ ಮಾದರಿ ಪ್ರಶ್ನಪತ್ರಿಕೆಯನ್ನು ನೀಡಿಲ್ಲ ಎಂದರು.

ಸದಸ್ಯರಾದ ಡಾ. ಎಂ. ಮುನಿರಾಜು ರವರು ಬಿ.ಕಾಮ್ (ಒಕೇಷನಲ್) 5 ವರ್ಷಗಳ ಅವಧಿಯ ಕೋರ್ಸು ವೆಬ್‌ಸೈಟ್ ನಲ್ಲಿ ಮಾದರಿ ಪ್ರಶ್ನೆಪತ್ರಿಕೆಯನ್ನು ನೀಡಲಾಗಿದೆ ಎಂದು ಸಭೆಗೆ ತಿಳಿಸಿದರು. ರಿಟೈಲ್ ಮ್ಯಾನೇಜ್‌ಮೆಂಟ್ ಕೋರ್ಸ್‌ನ್ನು ಬಿ.ಎಂ.ಎಸ್ ಮಹಿಳಾ ಕಾಲೇಜಿನಲ್ಲಿ ನಡೆಸಲಾಗುತ್ತಿದೆ, ಇವರು ಸಂಯೋಜನೆಗೆ ಅರ್ಜಿ ಸಲ್ಲಿಸಿರುವುದಿಲ್ಲ ಎಂದು ತಿಳಿಸಿದರು.

ಸದಸ್ಯರಾದ ಶ್ರೀ ತಿಪ್ಪೇಸ್ವಾಮಿ ರವರು ಸಂಬಂಧ ಪಟ್ಟ ಅಧ್ಯಯನ ಮಂಡಳಿಯಲ್ಲಿ ಚರ್ಚೆಮಾಡಿ ಏನಾದರೂ ಬದಲಾವಣೆ ಮಾಡಬೇಕಿದ್ದರೆ ಅಲ್ಲೇ ಪರಿಹರಿಸಿಕೊಳ್ಳಿ ಎಂದರು.

**ವಿದ್ಯಾವಿಷಯಕ ಪರಿಷತ್ತಿನ ನಿರ್ಣಯ:**

**04.12.2020 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಸ್ಥಾಯಿ ಸಮಿತಿ ಸಭೆಗಳ ನಡಾವಳಿಗಳನ್ನು ಅನುಮೋದಿಸಲಾಯಿತು**

**ವಿಷಯ ಸಂಖ್ಯೆ:-5 ಶ್ರೀ ಸತೀಶ್ ಎಂ, ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು, ದಿನಾಂಕ 24.12.2020 ರಂದು ಸಲ್ಲಿಸಿದ ಗೊತ್ತುವಳಿಗಳು.**

ಸದಸ್ಯರಾದ ಶ್ರೀ ಸತೀಶ್ ರವರು ಕೆಲವು ವಿಷಯಗಳನ್ನು ಈ ಸಭೆಯ ಗಮನಕ್ಕೆ ತರಬಯಸಿದರು.

(1) NAAC – ರವರ ಅಡಿಯಲ್ಲಿ ಎಲ್ಲಾ ವಿದ್ಯಾರ್ಥಿಗಳ ಸಂಯೋಜನೆಯ ವಿವರಗಳು ಜಾಲತಾಣದಲ್ಲಿ ಇರಬೇಕು.

(2) ವಿಶ್ವವಿದ್ಯಾನಿಲಯವು ವಿತರಿಸುತ್ತಿರುವ ಅಂಕಪಟ್ಟಿಗಳಲ್ಲಿ ಮುದ್ರಣಗೊಂಡಿರುವ ಗುಣಮಟ್ಟ ಹಲವು ಚೆನ್ನಾಗಿದೆ ಕೆಲವು ಚೆನ್ನಾಗಿಲ್ಲ, ಆದುದರಿಂದ ಗುಣಮಟ್ಟವನ್ನು ಕಾಪಾಡಿಕೊಳ್ಳಬೇಕು ಎಂದರು.

(3) ವಿಶ್ವವಿದ್ಯಾನಿಲಯ ಅಥವಾ ವಿಶ್ವವಿದ್ಯಾಲಯ ಎಂದು ಸಂಭೋದಿಸಬೇಕೆಂಬ ಸಂಶಯವನ್ನು ವ್ಯಕ್ತಪಡಿಸಿದರು.

(4) ವಿದ್ಯಾರ್ಥಿಗಳು SSLC/ PUC ಮಾಹಿತಿ ತುಂಬುವ ಪ್ರಕ್ರಿಯೆಯನ್ನು ಸುಲಭ ಮಾಡಲು ಕೇಳಿಕೊಂಡರು.

(5) ಸಂಯೋಜನೆ ನೀಡಲು ಸ್ಥಳೀಯ ವಿಚಾರಣಾ ಸಮಿತಿಗಳು ಕಾಲೇಜುಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಒಂದೇ ಅಧ್ಯಾಪಕರ ಹೆಸರು ಎರಡೆರಡು ಸಂಸ್ಥೆಗಳಲ್ಲಿ ಗುರುತಿಸಲ್ಪಟ್ಟಿರುವುದು ಕಂಡುಬಂದಿದೆ. ಹಾಗಾಗಿ ಒಬ್ಬ ವ್ಯಕ್ತಿಯನ್ನು ಒಂದು ಕಡೆ ಮಾತ್ರ ಗುರುತಿಸಲು ಸೂಚಿಸಬೇಕು. ಆದುದರಿಂದ ಪರೀಕ್ಷೆಗೆ ಸಂಬಂಧಿಸಿದ ವಿಷಯಗಳಿಗೆ ಅನುಕೂಲವಾಗುತ್ತದೆ.

ಸದಸ್ಯರಾದ ಡಾ. ಎಂ. ಮುನಿನಾರಾಯಣಪ್ಪ ರವರು ವಿದ್ಯಾರ್ಥಿಗಳ ದಾಖಲಾತಿ ವಿಧಾನದ ವಿಷಯದ ಬಗ್ಗೆ ಸಾಕಷ್ಟು ಚರ್ಚೆಗಳಾಗಿವೆ. ಅಂಕಪಟ್ಟಿಯಿಂದ ಮೊದಲುಗೊಂಡು ಸಂಪರ್ಕ ಮಾಡಿಕೊಂಡರೆ ಪ್ರತಿಯೊಬ್ಬ ವಿದ್ಯಾರ್ಥಿಯ ಪೂರ್ಣವಿವರಗಳು ವಿಶ್ವವಿದ್ಯಾನಿಲಯದ ಬಳಿ ಇರುತ್ತದೆ. ಇದಕ್ಕೆ ಸಂಬಂಧಿಸಿದಂತೆ SSLC ಮತ್ತು PUC Board ಜೊತೆಗೆ ವಿಶ್ವವಿದ್ಯಾನಿಲಯವು ಒಡಂಬಡಿಕೆ ಮಾಡಿಕೊಳ್ಳಬಹುದು ಎಂದು ಅಭಿಪ್ರಾಯಪಟ್ಟರು.

ಸದಸ್ಯರಾದ ಪ್ರೊ ಕೆ. ಎನ್ ಗೋದಾಮಣಿ ಯವರು ಮಾತನಾಡಿ ವಿಶ್ವವಿದ್ಯಾನಿಲಯವು ಎಲ್ಲಾ Cell ಗಳನ್ನು ಪ್ರಾರಂಭಮಾಡಲು ಸೂಚಿಸಿ ಅನುಮತಿಸಿದೆ. ಅವರನ್ನು 11 ಕಾಲೇಜುಗಳ ಆಡಳಿತ ಮಂಡಳಿ (Governing Council) ಸದಸ್ಯರನ್ನಾಗಿ ನೇಮಿಸಿದೆ. 11 ಕಾಲೇಜುಗಳಲ್ಲಿ 3 ಕಾಲೇಜಿನವರು ಮಾತ್ರ ಅವರನ್ನು ಸಭೆಗೆ ಕರೆಯುತ್ತಿರುವುದಾಗಿ ತಿಳಿಸಿದರು. ಸಂಯೋಜನಾ ಅರ್ಜಿಯಲ್ಲಿ Governing Council ಅಂಕಣ ಕಂಡು ಬರುತ್ತಿಲ್ಲ ಎಂದು ತಿಳಿಸಿದರು.

ಸದಸ್ಯರಾದ ಶ್ರೀ ತಿಪ್ಪೇಸ್ವಾಮಿ ರವರು ಪರಿನಿಯಮಗಳು ಅತ್ಯಂತ ಅವಶ್ಯಕ ಹಾಗೂ ಎಲ್ಲರೂ ಅವುಗಳನ್ನು ಅನುಸರಿಸಲೇಬೇಕು. ಪರಿನಿಯಮಗಳನ್ನು ಅನುಸರಿಸಿರುವ ಬಗ್ಗೆ ವಿಚಾರಣೆ ಮಾಡಲು ಅವಶ್ಯಕತೆ ಇದ್ದಲ್ಲಿ ಒಂದು ಸಮಿತಿಯನ್ನು ರಚಿಸಬಹುದು ಎಂದು ಅಭಿಪ್ರಾಯಪಟ್ಟರು. NIC ರವರ ಬಳಿ SSLC/PUC ವಿದ್ಯಾರ್ಥಿಗಳ ಎಲ್ಲಾ ವಿವರಗಳು ಲಭ್ಯತೆ ಇರುವುದರಿಂದ ಅವರಲ್ಲಿ ಒಪ್ಪಂದ ಮಾಡಿಕೊಂಡು ವಿವರಗಳನ್ನು ಪಡೆಯಲು ಅವಕಾಶ ಇದೆ ಎಂದರು.

ಸಭಾಧ್ಯಕ್ಷರು, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯವು ಮರು ನೇಮಕಗೊಂಡಂತೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಎಂಬ ವಿಷಯದ ಬಗ್ಗೆ ವಿದ್ಯಾರ್ಥಿಗಳಿಗೆ ನೀಡಬೇಕಾಗಿರುವ ಅಂಕಪಟ್ಟಿ, ಮೈಗ್ರೇಷನ್ ಪ್ರಮಾಣ ಪತ್ರ, ಪದವಿ ಪ್ರಮಾಣ ಪತ್ರಗಳ ಬಗ್ಗೆ ಕ್ರಮವಹಿಸಲಾಗಿದೆ. ಅವರಿಗೆ ಇವುಗಳನ್ನು ನೀಡುವಾಗ ಬೆಂಗಳೂರು ನಗರ ವಿಶ್ವವಿದ್ಯಾನಿಲಯ formerly known as ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ ಎಂದು ಸೂಚಿಸಲಾಗುವ ಕ್ರಮವನ್ನು ಕೈಗೊಂಡಿದೆ.

ಕುಲಸಚಿವರು (ಮೌಲ್ಯಮಾಪನ) ಮಾತನಾಡಿ ವಿಶ್ವವಿದ್ಯಾನಿಲಯ ಎಂದು Gazette notification ಆಗಿದೆ. ಆದುದರಿಂದ ಅದು "ನಿಲಯ" ಎಂದು ಹೇಳಿದರು. ಹಾಗೂ ಅಂಕಪಟ್ಟಿಗಳಲ್ಲಿ ವಿಶ್ವವಿದ್ಯಾನಿಲಯ ಎಂದು ಮುದ್ರಿಸಲಾಗುವುದು. ವಿಶ್ವವಿದ್ಯಾನಿಲಯ ಪ್ರಾರಂಭಗೊಂಡ ದಿನಾಂಕದಿಂದ 2018-19 ನೇ ಸಾಲಿನ ಎಲ್ಲಾ ವಿದ್ಯಾರ್ಥಿಗಳಿಗೆ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯವು Chancellor ರವರಿಂದ ಅಂಕಿತಗೊಂಡ ದಿನದಂತೆ ಅವರಿಗೆ ನೀಡುವ Marks Card, Degree Certificate, Official Transcript, Migration Certificate ಜೊತೆಗೆ ಬೇರೆ ಯಾವುದಾದರೂ ಹೆಚ್ಚುವರಿ ಪ್ರಮಾಣ ಪತ್ರಗಳಲ್ಲಿ Bengaluru City University earlier known as Bengaluru Central University ಎಂದು ನೀಡಲಾಗುವುದು.

ಸಭಾಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ NIC ರವರ ಬಳಿ ಇರುವ ವಿವರಗಳು ಸರ್ಕಾರಕ್ಕೆ ಸಂಬಂಧಿಸಿದ್ದವುಗಳು ಆಗಿರುತ್ತವೆ. ವಿಶ್ವವಿದ್ಯಾನಿಲಯದಿಂದ ಯಾವುದೇ ಕ್ರಮ ಜರುಗಿಸಲು ಅವಕಾಶ ಇಲ್ಲ. ಅತಿಥಿ ಉಪನ್ಯಾಸಕರು ಎರಡೆರಡು ಕಡೆ ಕೆಲಸ ಮಾಡಬಹುದು ಮತ್ತು ಅತಿಥಿ ಉಪನ್ಯಾಸಕರಿಗೆ ಪರೀಕ್ಷಾ ಸಂಬಂಧಿತ ಕೆಲಸಗಳನ್ನು ನೀಡಲು ಬರುವುದಿಲ್ಲ ಎಂದು ತಿಳಿಸಿದರು.

ಸದಸ್ಯರಾದ ಶ್ರೀ ಸತೀಶ್ ರವರು ವಿದ್ಯಾರ್ಥಿಗಳ ವಿವರಗಳನ್ನು ಮುಂಚೆಯೇ ಸಂಬಂಧಿಸಿದ ದಾಖಲಾತಿ/ ಅರ್ಜಿಗಳಲ್ಲಿ ತುಂಬಲ್ಪಟ್ಟಿದ್ದರೆ ಅದನ್ನು ಮತ್ತೊಮ್ಮೆ ಸ್ಥಳೀಯ ವಿಚಾರಣಾ ಸಮಿತಿಯವರು ಬೇಟಿ ನೀಡಿದಾಗ ಆ ವಿವರಗಳನ್ನು ತುಂಬುವ ಪ್ರಕ್ರಿಯೆ ಇರುವುದಿಲ್ಲ. ಒಂದೊಂದು ಕಾಲೇಜಿನಲ್ಲಿ 3,000 ವಿದ್ಯಾರ್ಥಿಗಳಿದ್ದರೆ ಸ್ಥಳೀಯ ವಿಚಾರಣಾ ಸಮಿತಿಯವರು / ಸಮಿತಿಯ ವರದಿಗಳನ್ನು ತುಂಬಲು ಸಮಯ ಹಿಡಿಯುವುದರಿಂದ ಅಂತಹ ಅರ್ಜಿಗಳಲ್ಲಿ ಮುಂಚೆಯೇ ವಿವರಗಳನ್ನು ತುಂಬಿ ಸಮಿತಿಯವರಿಗೆ ನೀಡುವ ಅವಕಾಶವನ್ನು ಕಲ್ಪಿಸಲು ಸೂಚಿಸಿದರು.

ಸದಸ್ಯರಾದ ಶ್ರೀ ತಿಪ್ಪೇಸ್ವಾಮಿ ರವರು ಹೊಸ software ಬರಲಿ ನಂತರ ಮಾಡಬಹುದು ಎಂದರು.

ವಿದ್ಯಾವಿಷಯಕ ಪರಿಷತ್ತಿನ ನಿರ್ಣಯ: ಗಮನಕ್ಕೆ ತೆಗೆದುಕೊಳ್ಳಲಾಯಿತು.

**ವಿಷಯ ಸಂಖ್ಯೆ:- 6 ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಅಡಿಯಲ್ಲಿ ಬರುವ ಸಂಶೋಧನಾ ಕೇಂದ್ರಗಳ ಮಾನ್ಯತೆ ಮುಂದುವರಿಸುವ ಕುರಿತು ನಿವೃತ್ತ ಕುಲಪತಿಗಳ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಗಳು ಸಂಶೋಧನಾ ಕೇಂದ್ರಗಳಿಗೆ ತನಿಖೆ ನಡೆಸಿ ಸಲ್ಲಿಸಿರುವ ವರದಿಗಳನ್ನು ಪರಿಗಣಿಸುವ ಬಗ್ಗೆ.**

ಸದಸ್ಯರಾದ ಡಾ. ಎಂ. ಮುನಿರಾಜು ರವರು ಅವರ ಅಧ್ಯಕ್ಷತೆಯಲ್ಲಿ St. Joseph College ಮತ್ತು RC ಕಾಲೇಜುಗಳಿಗೆ ಭೇಟಿ ನೀಡಿ ವರದಿ ನೀಡಲಾಗಿತ್ತು. ಆದರೆ, ಅದೇ ಕಾಲೇಜುಗಳಿಗೆ ನಿವೃತ್ತ ಉಪಕುಲಪತಿಗಳಿಂದ ಮತ್ತೊಮ್ಮೆ ಭೇಟಿ ಮಾಡಿಸಿ ವರದಿ ಪಡೆಯಲಾಗಿದೆ. ಅವರು ನೀಡಿದ್ದ ವರದಿ, ಹೊಸ ಸಮಿತಿ ನೀಡಿರುವ ವರದಿಯಲ್ಲಿ ಪ್ರತಿಯೊಂದು ಸಾಮ್ಯತೆಯಿಂದ ಕೂಡಿದೆ. ಹಾಗೂ ಹೊಸ ಸಮಿತಿಯವರು, ಡೀನರು ಇಲ್ಲದೆ ಕಾಲೇಜಿಗೆ ಭೇಟಿ ನೀಡಿ ವರದಿ ಸಲ್ಲಿಸಿದ್ದಾರೆ. ಹಾಗಾದರೆ ಡೀನರಿಗೆ ಬೆಲೆಯೇ ಇಲ್ಲವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಭಾಧ್ಯಕ್ಷರು ವರದಿಗಳನ್ನು ಪಡೆಯುವಾಗ ಸ್ವಲ್ಪ ಲೋಪದೋಷಗಳಾಗಿವೆ, ಆದುದರಿಂದ ಈಗ ಪಡೆಯಲಾಗಿರುವ 22 ಕಾಲೇಜಿನ ವರದಿಗಳನ್ನು ಅನುಮೋದಿಸಲು ಮನವಿ ಮಾಡಿಕೊಂಡರು.

ಸದಸ್ಯರಾದ ಡಾ. ಎಂ. ಮುನಿನಾರಾಯಣಪ್ಪ ರವರು ಈ ವರದಿಗಳಲ್ಲಿ ಪರಿಪೂರ್ಣ ಸ್ಪಷ್ಟತೆ ಇರುವುದಿಲ್ಲ. ಆ ಸಂಸ್ಥೆಯವರು VTU MBA, BU MBA Course ನಡೆಸುತ್ತಿರುತ್ತಾರೆ ಮತ್ತು ಇದು ಯಾವರೀತಿ ಸಮಂಜಸವೆಂದರು. ಖಾಸಗಿ (private) ವಿಶ್ವವಿದ್ಯಾಲಯ ಎಂದು ಗುರುತಿಸಿದ ಮೇಲೆ BCU ಯಿಂದ ಇಂತಹ ಸಂಸ್ಥೆಗಳನ್ನು ಸಂಶೋಧನಾ ಕೇಂದ್ರವೆಂದು ಗುರುತಿಸುವುದು ಅಸಮಂಜಸ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸದಸ್ಯರಾದ ಶ್ರೀ ತಿಪ್ಪೇಸ್ವಾಮಿ ರವರು ತುಂಬಾ ವಿಶ್ವವಿದ್ಯಾಲಯಗಳು ಇರುವಾಗ clear direction ಇರಬೇಕು.

ಒಬ್ಬ ಮಾರ್ಗದರ್ಶಿಗೆ 8 ವಿದ್ಯಾರ್ಥಿಗಳನ್ನು ನಿಗದಿ ಪಡಿಸಲಾಗಿದೆ. ಅದರಂತೆ ಅವರ ಬಳಿ 5 ವಿದ್ಯಾರ್ಥಿಗಳು ಇದ್ದಾಗ, ಇತರೆ ವಿಶ್ವವಿದ್ಯಾಲಯದ 3 ವಿದ್ಯಾರ್ಥಿಗಳಿಗೆ ಅವರು ಮಾರ್ಗದರ್ಶನ ಮಾಡಬಹುದು. ವಿಷಯ ತಜ್ಞರ (Expert) ಪಟ್ಟಿ ಕೊಡುವುದು ಸಂಬಂಧಪಟ್ಟ ಅಧ್ಯಯನ ಮಂಡಳಿಯ ಅಧ್ಯಕ್ಷರುಗಳು. ಆದುದರಿಂದ ವಿಶ್ವವಿದ್ಯಾನಿಲಯ ಈ ವಿಷಯದಲ್ಲಿ ಏನೂ ಮಾಡಲು ಸಾಧ್ಯವಿಲ್ಲ ಎಂದು ಸಭಾಧ್ಯಕ್ಷರು ತಿಳಿಸಿದರು.ಸಂಬಂಧಪಟ್ಟ ಒಳಗಿನ ಮತ್ತು ಹೊರಗಿನ ಮಾರ್ಗದರ್ಶಿಗಳ ಪಟ್ಟಿಯನ್ನು ಅಧ್ಯಯನ ಮಂಡಳಿ ಮುಖಾಂತರ ಕಳುಹಿಸಿಕೊಟ್ಟಿರುತ್ತಾರೆ ಮತ್ತು ಅವರು ನೀಡಿರುವ ಪಟ್ಟಿಯಲ್ಲಿ ಉಪಕುಲಪತಿಗಳು ಎರಡು ಹೆಸರುಗಳನ್ನು ಸೂಚಿಸುತ್ತಾರೆ (Internal/ external)

ಸದಸ್ಯರಾದ ಡಾ. ಎಂ. ಮುನಿನಾರಾಯಣಪ್ಪ ರವರು ಪ್ರತಿಯೊಂದು ಸಂಶೋಧನಾ ಕೇಂದ್ರದಲ್ಲಿ ಇಬ್ಬರು ನುರಿತ ಮಾರ್ಗದರ್ಶಕರು ಇರಬೇಕು. 5 years experience, paper presentation ಮಾಡಿರಬೇಕು ಎಂಬ ಷರತ್ತಿನ ನಿಬಂಧನೆಗೆ ಒಳಪಟ್ಟಿದೆ ಇದನ್ನು ಪಾಲಿಸಿರುವುದಿಲ್ಲ ಎಂದು ಅಭಿಪ್ರಾಯಪಟ್ಟರು.

ಸದಸ್ಯರಾದ ಡಾ. ವಿ.ಆರ್. ದೇವರಾಜ್ ರವರು Doctoral ಸಮಿತಿಗೆ 99.7 ರಷ್ಟು ಅಧಿಕಾರ ಇರುವುದರಿಂದ ಏನೂ ಮಾಡಲಾಗುವುದಿಲ್ಲ. Cluster University ಗೆ PG level ವರೆಗೆ ಮಾತ್ರ ಅವಕಾಶ ಇರುವುದರಿಂದ ಸಂಶೋಧನಾ ಕೇಂದ್ರವನ್ನು ನೀಡುವುದು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಟ್ಟಿದೆ ಎಂದರು.

**ವಿದ್ಯಾವಿಷಯಕ ಪರಿಷತ್ತಿನ ನಿರ್ಣಯ:**

**ನಿವೃತ್ತ ಕುಲಪತಿಗಳ ಅಧ್ಯಕ್ಷತೆಯಲ್ಲಿ ಸಂಶೋಧನಾ ಕೇಂದ್ರಗಳಿಗೆ ತನಿಖೆ ನಡೆಸಿ ಸಲ್ಲಿಸಿರುವ ವರದಿಗಳನ್ನು ಅನುಮೋದಿಸಲಾಯಿತು..**

**ವಿಷಯ ಸಂಖ್ಯೆ:- 7 Charan B.Ed College, Bengaluru proposal initiated under Section 63(3) of the Karnataka State Universities Act, 2000 for withdrawal of affiliation.**

ಸದಸ್ಯರಾದ ಡಾ. ಎಂ. ಮುನಿನಾರಾಯಣಪ್ಪ ರವರು ಕಾಲೇಜಿನ ಸಂಯೋಜನೆಯನ್ನು ರದ್ದುಗೊಳಿಸಬಹುದು. ಹಾಗೂ ವಿದ್ಯಾರ್ಥಿಗಳನ್ನು ಅವರವರ ಅನುಕೂಲತೆಗೆ ಅನುಸಾರವಾಗಿ ಕಾಲೇಜುಗಳಿಗೆ ಮರು ಹಂಚಿಕೆ ಮಾಡಬಹುದು. ಅವಶ್ಯಕತೆ ಇದ್ದಲ್ಲಿ ಅಂತಹ ಕಾಲೇಜುಗಳಲ್ಲಿ ವಿದ್ಯಾರ್ಥಿ ಪ್ರಮಾಣ ಹೆಚ್ಚಳ ಮಾಡಬಹುದು ಎಂದು ಅಭಿಪ್ರಾಯ ಪಟ್ಟರು.

**ವಿದ್ಯಾವಿಷಯಕ ಪರಿಷತ್ತಿನ ನಿರ್ಣಯ:**

**Charan B.Ed College, Bengaluru proposal initiated under Section 63(3) of the Karnataka State Universities Act, 2000 for withdrawal of affiliation ಬಗ್ಗೆ ಸಿಂಡಿಕೇಟ್ ತೆಗೆದುಕೊಂಡಿರುವ ನಿರ್ಣಯವನ್ನು ಅನುಮೋದಿಸಿತು**

**ವಿಷಯ ಸಂಖ್ಯೆ:- 8 Approval of Syllabus relating to subjects in 3rd & 4th Semester MBA.**

ಸದಸ್ಯರಾದ ಡಾ. ಎಂ. ಮುನಿನಾರಾಜು ರವರು ಈ ಪಠ್ಯಕ್ರಮವನ್ನು ಡೀನರ ಗಮನಕ್ಕೆ ತರದೆ ಈ ಸಭೆಯಲ್ಲಿ ಮಂಡಿಸಲಾಗಿದೆ ಆದುದರಿಂದ ಮುಂದಿನ ಸಭೆಗೆ ನಿಯಮಗಳನ್ನು ಅನುಸರಿಸಿ ಈ ವಿಷಯವನ್ನು ಮಂಡಿಸಿ ಎಂದರು.

ಸದಸ್ಯರಾದ ಶ್ರೀ ಚಿಕ್ಕಮುನಿಯಪ್ಪ ರವರು ಆಯಾಯ ವಿಷಯದ ಡೀನರ ಅಂಕಿತ ಬಹು ಮುಖ್ಯವಾಗಿರುತ್ತದೆ. ಆದುದರಿಂದ ಡೀನರನ್ನು ಬಿಟ್ಟು ಈ ಪಠ್ಯಕ್ರಮವನ್ನು ತಯಾರಿಸಿದ್ದರೆ ಅದನ್ನು ಮನ್ನಣೆ ಮಾಡಬಾರದು ಎಂದು ಅಗ್ರಹಿಸಿದರು.

ಸದಸ್ಯರಾದ ಡಾ. ಎಂ. ಮುನಿನಾರಾಯಣಪ್ಪ, ಹೊಸ concept, wonderful, classes ನಡೆಯುತ್ತಾ ಇದೆ ಆದುದರಿಂದ ಇದನ್ನು ಒಪ್ಪ ಬಹುದು ಎಂದು ವಾದಿಸಿದರು.

ಕುಲಸಚಿವರು (ಮೌಲ್ಯಮಾಪನ) ಇದು ಒಂದು additional specialization ಎಂದು ತಿಳಿಸಿದರು. ಪಠ್ಯಕ್ರಮಗಳನ್ನು ಅಧ್ಯಯನ ಮಂಡಳಿಯಲ್ಲಿ ಮೊದಲು ಅನುಮೋದನೆ ಪಡೆದು ನಂತರ ಸಂಬಂಧ ಪಟ್ಟ ನಿಖಾಯದ (Faculty) ಅನುಮೋದನೆ ಪಡೆದ ಬಳಿಕ ವಿದ್ಯಾವಿಷಯಕ ಪರಿಷತ್ತಿನ ಸಭೆಗೆ ಮಂಡಿಸಲಾಗುವುದು. ವಾಣಿಜ್ಯ ನಿಖಾಯವನ್ನು ಇನ್ನೂ ನೇಮಕ ಮಾಡಿಲ್ಲದಿರುವುದರಿಂದ ಅಧ್ಯಯನ ಮಂಡಳಿಯು ಅನುಮೋದಿಸಿರುವ ಪಠ್ಯಕ್ರಮವನ್ನು ಈ ಸಭೆಯಲ್ಲಿ ಮಂಡಿಸಲಾಗಿದೆ.

ಸಭಾಧ್ಯಕ್ಷರು ಪಠ್ಯಕ್ರಮವನ್ನು ಅನುಮೋದಿಸ ಬೇಕಾಗಿರುವುದರಿಂದ. ವಾಣಿಜ್ಯ ನಿಖಾಯದ ಡೀನರ ಅಭಿಪ್ರಾಯದ ಷರತ್ತಿಗೆ ಒಳಪಟ್ಟು ಈ ಪಠ್ಯಕ್ರಮವನ್ನು ಅನುಮೋದಿಸಬಹುದು ಎಂದು ಸೂಚಿಸಿದರು.

ಸದಸ್ಯರಾದ ಡಾ. ಪಿ. ಆರ್. ಚೇತನ ರವರು ಸ್ಥಾಯಿ ಸಮಿತಿಯ ಮುಂದೆಯೂ ಈ ಪಠ್ಯಕ್ರಮವನ್ನು ಮಂಡಿಸಿರುವ ಬಗ್ಗೆ ಪ್ರಸ್ತಾಪ ಇರುವುದಿಲ್ಲ ಎಂದು ಸಭೆಯ ಗಮನಕ್ಕೆ ತಂದರು.

ಸಭಾಧ್ಯಕ್ಷರು ಇಬ್ಬರು MBBS ವಿದ್ಯಾರ್ಥಿಗಳು ಈ specialization ನ ಅಡಿಯಲ್ಲಿ MBA ಗೆ ಪ್ರವೇಶ ಪಡೆದಿದ್ದಾರೆ. 1ನೇ ಹಾಗೂ 2 ನೇ ಸೆಮಿಸ್ಟರ್ ಪಠ್ಯಕ್ರಮಗಳು ಎಲ್ಲಾ ವಿದ್ಯಾರ್ಥಿಗಳಿಗೆ ಒಂದೇ ಆಗಿರುತ್ತದೆ. ಈ ಪಠ್ಯಕ್ರಮವು ಆರೋಗ್ಯಕ್ಕೆ ಸಂಬಂಧಿಸಿದ್ದಾಗಿದ್ದು ಈ ವಿಶ್ವವಿದ್ಯಾನಿಲಯದಲ್ಲಿದೆ ಎಂದು ಪ್ರವೇಶ

ಪಡೆದುಕೊಂಡಿದ್ದಾರೆ. ಆದುದರಿಂದ ಈ ಇಬ್ಬರು ಹುಡುಗರನ್ನು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಕಳುಹಿಸಿ ಕೊಡುತ್ತೀವಿ ಸೇರಿಸಿಕೊಳ್ಳಿ ಎಂದು ಕೇಳಲಾಗಿ ಅವರು ಈ ವಿದ್ಯಾರ್ಥಿಗಳ ಪ್ರವೇಶಕ್ಕೆ ಅನುಮತಿ ನೀಡಿರುವುದಿಲ್ಲ. ಆದುದರಿಂದ ಈ ವಿದ್ಯಾರ್ಥಿಗಳ ಹಿತದೃಷ್ಠಿಯಿಂದ ಈ ಪಠ್ಯಕ್ರಮವನ್ನು ಅನುಮೋದಿಸುವುದು ಒಳಿತು ಎಂದು ಅಭಿಪ್ರಾಯ ಪಟ್ಟರು.

ಸದಸ್ಯರಾದ ಡಾ. ಎಂ. ಮುನಿರಾಜು ರವರು ಇಬ್ಬರೇ ವಿದ್ಯಾರ್ಥಿಗಳನ್ನು ಪ್ರವೇಶ ಮಾಡಿಸಿಕೊಂಡಿದ್ದಾರೆ, ಇದಕ್ಕೆ ಎಲ್ಲಿದೆ ಅವಕಾಶ, 10 ವಿದ್ಯಾರ್ಥಿಗಳು ಎಂದು ನಿಯಮಾವಳಿಗಳಲ್ಲಿ ಇದೆ, ವಿಶ್ವವಿದ್ಯಾನಿಲಯಕ್ಕೆ ಸುಮ್ಮನೆ ಹೊರೆಯಾಗುತ್ತದೆ. ಈ ಇಬ್ಬರು ವಿದ್ಯಾರ್ಥಿಗಳಿಗೋಸ್ಕರ ಪ್ರಶ್ನೆ ಪತ್ರಿಕೆ ತಯಾರಿಸಬೇಕು ಎಂದರು. ಈ ಪಠ್ಯಕ್ರಮವನ್ನು ಅನುಮೋದಿಸಿ ಸಂಬಂಧ ಪಟ್ಟ ಕಾಲೇಜಿನವರಿಗೆ ರೂ. 4 ಲಕ್ಷ ದಂಡ ವಿಧಿಸಬೇಕೆಂದರು.

ಸದಸ್ಯರಾದ ಪ್ರೊ. ಕೆ. ಎನ್. ಗೋದಾಮಣಿ ರವರು 1ನೇ ಹಾಗೂ 2 ನೇ ಸೆಮೆಸ್ಟರ್ ಪಠ್ಯಕ್ರಮ ಎಲ್ಲಾ ವಿದ್ಯಾರ್ಥಿಗಳಿಗೂ ಒಂದೇ ಅಗಿರುತ್ತದೆ. ಈ ಇಬ್ಬರು ವಿದ್ಯಾರ್ಥಿಗಳು MBBS ಪದವಿ ಪಡೆದವರಾಗಿದ್ದು, ಈ Specialization ಆರೋಗ್ಯ (Health Care) ಸಂಬಂಧಿಸಿರುವುದರಿಂದ ಅವರ ಮುಂದಿನ ಜೀವನಕ್ಕೆ, ವಿದ್ಯಾರ್ಹತೆಗೆ ಅನುಕೂಲವಾಗುವುದೆಂಬ ನಿಟ್ಟಿನಲ್ಲಿ ಪ್ರವೇಶ ಪಡೆದುಕೊಂಡಿದ್ದಾರೆ. ಅಧ್ಯಯನ ಮಂಡಳಿಯು ಪಠ್ಯಕ್ರಮವನ್ನು ಸಿದ್ದಪಡಿಸಿ ಜಾರಿಗೊಳಿಸಲು ಶಿಫಾರಸ್ಸು ಮಾಡಿದೆ ಮತ್ತು ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ ಮಾಡಿದರು.

ಸದಸ್ಯರಾದ ಶ್ರೀ ತಿಪ್ಪೇಸ್ವಾಮಿ ರವರು ಪಠ್ಯಕ್ರಮವಿಲ್ಲದಿದ್ದರೂ ಸಹ ಕಾಲೇಜಿನವರು ಈ ಇಬ್ಬರು ವಿದ್ಯಾರ್ಥಿಗಳಿಗೆ ತಪ್ಪು ಮಾರ್ಗದರ್ಶನ ಮಾಡಿ ಪ್ರವೇಶ ಪಡೆದಿರುವುದಕ್ಕೆ ಡಂಡವನ್ನು ವಿಧಿಸಬೇಕು ಮತ್ತು ವಿದ್ಯಾರ್ಥಿಗಳ ಹಿತದೃಷ್ಠಿಯಿಂದ ಇಲ್ಲಿ ಮಂಡಿಸಲಾಗಿರುವ ಪಠ್ಯಕ್ರಮವನ್ನು ಅನುಮೋದಿಸಬಹುದು ಎಂದು ಸೂಚಿಸಿದರು.

ವಿದ್ಯಾವಿಷಯಕ ಪರಿಷತ್ತಿನ ನಿರ್ಣಯ:

**ಸಭೆಯು ಸಂಬಂಧ ಪಟ್ಟ ಕಾಲೇಜಿನವರಿಗೆ ದಂಡವನ್ನು ವಿಧಿಸುವ ಷರತ್ತಿನೊಂದಿಗೆ ಅಧಿಕಾರವನ್ನು ಕುಲಪತಿಗಳಿಗೆ ನೀಡಿ ಈ ಪಠ್ಯಕ್ರಮವನ್ನು ಅನುಮೋದಿಸಿತು.**

## Point of Order

ಸದಸ್ಯರಾದ ಡಾ. ಹರಿಪ್ರಸಾದ್ ರವರು ರಸಾಯನಶಾಸ್ತ್ರ ವಿಭಾಗವು 1958 ರಲ್ಲಿ ಸ್ಥಾಪಿತಗೊಂಡಿದೆ. 35 ಕೋರ್ಸುಗಳನ್ನು ನಡೆಸಲಾಗುತ್ತಿದೆ. ಈಗಲೂ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ರಸಾಯನಶಾಸ್ತ್ರ ವಿಭಾಗದಲ್ಲಿ ಸೀಟುಗಳು ಮೊದಲಿಗೆ ಭರ್ತಿ ಆಗುವುದರಿಂದ ಇಲ್ಲಿಗೆ ತುಂಬಾ ಬೇಡಿಕೆ (demand) ಇದೆ. ಇಲ್ಲಿರುವ ಕೋರ್ಸುಗಳಿಗೆ ಇಂಟರ್‌ನೆಟ್ ಸೌಲಭ್ಯವನ್ನು ಇನ್ನೂ ನೀಡಿಲ್ಲ ಹಾಗೂ ಶಿಕ್ಷಕರನ್ನು ನೇಮಿಸುವ ಕಾರ್ಯ ಆಗಿರುವುದಿಲ್ಲ ಎಂದು ಅಭಿಪ್ರಾಯಪಟ್ಟರು.

ಸದಸ್ಯರಾದ ಡಾ. ಎಂ. ಪಾಂಡುರಂಗಪ್ಪ ರವರು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಈ ವಿಭಾಗಕ್ಕೆ 24 ಹುದ್ದೆಗಳು ಸರ್ಕಾರದಿಂದ ಸೃಜನವಾಗಿತ್ತು. ವಿಭಜನೆಯ ನಂತರ 8 ಹುದ್ದೆಗಳನ್ನು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಹಂಚಲಾಗಿ ಉಳಿದ 16 ಹುದ್ದೆಗಳಲ್ಲಿ ಒಂದು ಹುದ್ದೆ ವಾಣಿಜ್ಯ ವಿಭಾಗಕ್ಕೆ ಬದಲಾಯಿಸಲಾಗಿ ಸದ್ಯಕ್ಕೆ 15 ಹುದ್ದೆಗಳು ಮಾತ್ರ ಈ ವಿಭಾಗದಲ್ಲಿ ಇದೆ. ಇಲ್ಲಿರುವ ಪ್ರತಿಯೊಂದು (4)

Specialization ಗೆ 7+7+7+7=(28) ಹುದ್ದೆಗಳು ಬೇಕಾಗಿರುತ್ತವೆ. ಈ ವಿಭಾಗದ ಪ್ರವೇಶಾತಿಗಾಗಿ ಅತ್ಯಧಿಕ ಬೇಡಿಕೆ ಇರುವುದರಿಂದ ಅತಿಥಿ ಉಪನ್ಯಾಸಕರಿಂದ quality work & geniuness ಇರುವುದಿಲ್ಲ.

ಕುಲಸಚಿವರು (ಮೌಲ್ಯಮಾಪನ) UGC ಗೆ ಪತ್ರ ಬರೆಯುವುದು ವ್ಯರ್ಥ ಪ್ರಯತ್ನ. 4 Specialization 4 ವಿಭಾಗಗಳು, 4 BoS, Separate Statutes, work load, ಇದು Unscientific ಎಂದರು.

ಸದಸ್ಯರಾದ ಶ್ರೀ ತಿಪ್ಪೇಸ್ವಾಮಿ, ಬೇರೆ ವಿಭಾಗಗಳನ್ನು ಸೃಷ್ಠಿ ಮಾಡಿರಿ. ವಾಣಿಜ್ಯ ವಿಭಾಗದ ಅಡಿ ಹೊಸ ಹೊಸ ಕೋರ್ಸುಗಳನ್ನು ತಂದು Revenue generate ಮಾಡಿ ಎಂದು ಸೂಚಿಸಿದರು.

ಅಂತಿಮವಾಗಿ ಕುಲಸಚಿವರು ಎಲ್ಲಾ ಸದಸ್ಯರ ಸಹಕಾರಕ್ಕೆ ಕೃತಜ್ಞತೆಗಳನ್ನು ಅರ್ಪಿಸಿ, ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-
ಸದಸ್ಯ ಕಾರ್ಯದರ್ಶಿಗಳು

ಸಹಿ/-
ಕುಲಪತಿಗಳು

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ